ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ

**District Urban Development Cell, Bidar.**

Office of the Deputy Commissioner, Bidar. Opp Old Bus Stand Bidar - 585 401.

Ph. No: 08482-229332, Fax: 08482-225262 E-mail: ka.bidar.dudc@gmail.com

ಸಂಖ್ಯೆ:ಜಿನಕೋ/ಸಿಬ್ಬಂದಿ/ಸಿಆರ್-20/2026-27/665 ದಿನಾಂಕ: -07-2026

## -: ಅಧಿಸೂಚನೆ :-

ವಿಷಯ : ರಾಜ್ಯದ ಮಹಾನಗರ ಪಾಲಿಕೆ ಮತ್ತು ನಗರಸಭೆಗಳಲ್ಲಿ ನೇರ ಪಾವತಿಯಡಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.

ಉಲ್ಲೇಖ: ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರುರವರ ಪತ್ರ ಸಂಖ್ಯೆ:513641/ಸಿಬ್ಬಂದಿ-2/ಇತರೆ/8/2021 ದಿನಾಂಕ 18.11.2025

***

ಮಹಾನಗರಪಾಲಿಕೆ ಮತ್ತು ನಗರಸಭೆಗಳಲ್ಲಿ ಶೇ.50 ರಷ್ಟು ಪೌರಕಾರ್ಮಿಕರನ್ನು ನೇರ ನೇಮಕಾತಿ ಉಳಿದ ಶೇ.50 ರಷ್ಟು ಪೌರಕಾರ್ಮಿಕರನ್ನು ನೇರಪಾವತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ. ಉಲ್ಲೇಖಿತ ಪತ್ರದಲ್ಲಿನ ಮಾರ್ಗಸೂಚಿಗಳನುಸಾರ ಜಿಲ್ಲೆಯಲ್ಲಿನ ನಗರಸಭೆಗಳಲ್ಲಿನ ನೇರಪಾವತಿಗೆ ಮಂಜೂರಾಗಿರುವ ಹುದ್ದೆಗಳನ್ನು ಮೀರದಂತೆ ಖಾಲಿ ಹುದ್ದೆಗಳನ್ನು ಖಚಿತಪಡಿಸಿಕೊಂಡು ನೇಮಕ ಮಾಡಿಕೊಳ್ಳಲು ಕ್ರಮವಹಿಸಲು ಆದೇಶಿಸಿರುತ್ತಾರೆ.

ಅದರಂತೆ ಬೀದರ ಜಿಲ್ಲೆಯ ಬೀದರ ಮಹಾನಗರ ಪಾಲಿಕೆ ಮತ್ತು ಬಸವಕಲ್ಯಾಣ ನಗರಗಳ ಸ್ವಚ್ಛತಾ ಕಾರ್ಯಕ್ಕೆ ತೊಂದರೆಯಾಗದಂತೆ ಪೌರ ಕಾರ್ಮಿಕ ಹುದ್ದೆಗಳನ್ನು ನೇರ ಪಾವತಿ ಮೂಲಕ ಭರ್ತಿ ಮಾಡಬೇಕಾಗಿರುವುದರಿಂದ ನೇರ ಪಾವತಿಯಡಿಯಲ್ಲಿ ಖಾಲಿ ಇರುವ ಈ ಕೆಳಕಂಡಂತೆ ಪೌರ ಕಾರ್ಮಿಕ ಹುದ್ದೆಗಳನ್ನು ನೇರ ಪಾವತಿ ಮುಖಾಂತರ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆ ಹೆಸರು | 700:1 ರಂತೆ ಮಂಜೂರಾದ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ (2024ನೇ ಸಾಲಿನ ಹಂತಕ್ಕೆ ಇರುವಂತೆ ಅಂದಾಜು ಜನಸಂಖ್ಯೆ) | ನೇರ ಪಾವತಿಗೆ ಮಂಜೂರಾದ ಹುದ್ದೆಗಳ (ನಗರಸಭೆಗಳಿಗೆ ಶೇ. 50%) | ನೇರ ಪಾವತಿಯಲ್ಲಿ ಭರ್ತಿ ಹುದ್ದೆಗಳ ಸಂಖ್ಯೆ | ನೇರ ಪಾವತಿಗೆ ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಬೀದರ ಮಹಾನಗರ ಪಾಲಿಕ | 311670 | 222 | 17 | 205 |
| 2 | ನಗರಸಭೆ ಬಸವಕಲ್ಯಾಣ | 84072 | 120 | 1 | 59 |

**ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕಾಲಮಿತಿ ಹಾಗೂ ವಿಳಾಸ:**

| ವಿವರ | ದಿನಾಂಕ ಮತ್ತು ಸಮಯ | ಅರ್ಜಿ ನಮೂನೆ ಪಡೆಯುವ/ ಸಲ್ಲಿಸುವ ವಿಳಾಸ |
|---|---|---|
| ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭ ದಿನಾಂಕ | ದಿನಾಂಕ18.07.2026 ರಿಂದ ಬೆ: 10:30 ರಿಂದ ಸಾ: 05.30 ರವರೆಗೆ (ರಜೆ ದಿನ ಹೊರತುಪಡಿಸಿ) | ಆಯುಕ್ತರು, ಬೀದರ ಮಹಾನಗರ ಪಾಲಿಕೆ ಕಾರ್ಯಾಲಯ ಬೀದರ |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ 20 .08.2026 ರವರೆಗೆ ಸಾ: 05.30 ರವರೆಗೆ | |

**ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕಾಲಮಿತಿ ಹಾಗೂ ವಿಳಾಸ:**

| ವಿವರ | ದಿನಾಂಕ ಮತ್ತು ಸಮಯ | **ಅರ್ಜಿ ನಮೂನೆ ಪಡೆಯುವ/ ಸಲ್ಲಿಸುವ ವಿಳಾಸ** |
|---|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭ ದಿನಾಂಕ | ದಿನಾಂಕ18.07.2026 ರಿಂದ ಬೆ: 10:30 ರಿಂದ ಸಾ: 05.30 ರವರೆಗೆ (ರಜೆ ದಿನ ಹೊರತುಪಡಿಸಿ) | ಪೌರಾಯುಕ್ತರು, ನಗರಸಭೆ ಕಾರ್ಯಾಲಯ ಬಸವಕಲ್ಯಾಣ |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ 10.08.2026 ರವರೆಗೆ ಸಾ: 05.30 ರವರೆಗೆ | |

**ವಯೋಮಿತಿ/ವಿದ್ಯಾರ್ಹತೆ:**

1. ಕನಿಷ್ಠ 18 ವರ್ಷ, ಗರಿಷ್ಟ ವಯೋಮಿತಿ 50 ವರ್ಷದೊಳಗಿರಬೇಕು.
2. ವಿದ್ಯಾರ್ಹತೆ ಅನ್ವಯಿಸುವುದಿಲ್ಲ, ಆದರೆ ಕನ್ನಡ ಭಾಷೆಯಲ್ಲಿ ಮಾತನಾಡಲು ಬರಬೇಕು.

**ಪೌರ ಕಾರ್ಮಿಕರ ನೇರ ಪಾವತಿ ಹುದ್ದೆಗೆ ಪರಿಗಣನೆಯ ಅಂಶಗಳು:**

1. ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಹೆಲ್ಪರ್ಸ್‌ಗಳಾಗಿ ಕಾರ್ಯ ನಿರ್ವಹಿಸುತ್ತಿರುವ/ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡುವುದು. (ಕಾರ್ಯ ನಿರ್ವಹಿಸಿದ ಅವಧಿಗೆ ESI/PF/ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ಅಥವಾ ಈ ಹಿಂದೆ ಹೊರಗುತ್ತಿಗೆ/ ದಿನಗೂಲಿ/ ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಪೌರಕಾರ್ಮಿಕ, ಲೋಡರ್ಸ್, ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್ ಹಾಗೂ ಹಾಜರಾತಿ ದಾಖಲೆಗಳನ್ನು ಪಡೆಯುವುದು).
2. ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಮರಣ ಹೊಂದಿದ ಪೌರಕಾರ್ಮಿಕರ ಕುಟುಂಬದ ಒಬ್ಬ ಸದಸ್ಯರನ್ನು ನೇರಪಾವತಿಯಡಿ ಹೊರಗುತ್ತಿಗೆ ದಿನಗೂಲಿ/ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್-19 ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ನೇಮಕ ಮಾಡಿಕೊಳ್ಳಲು ಪರಿಗಣಿಸುವುದು.
3. ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಸಾರ್ವಜನಿಕ ಶೌಚಾಲಯ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಕಾರ್ಯನಿರ್ವಹಿಸಿ ಅನುಭವವುಳ್ಳ ಸ್ಥಳೀಯ ಸ್ವಚ್ಛತಾ ಕೆಲಸಗಾರರನ್ನು ಪರಿಗಣಿಸುವುದು. (ಕಾರ್ಯನಿರ್ವಹಿಸಿದ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್, ಹೆಲ್ಪರ್ಸ್ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಅವಧಿಗೆ ESI/PF/ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ಅಥವಾ ಹಾಜರಾತಿ ದಾಖಲೆಗಳನ್ನು ಪಡೆಯುವುದು)
4. ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಅಧಿನಿಯಮದಡಿ ಖಾಲಿ ಇರುವ ಹುದ್ದೆಗಳ ಪೈಕಿ ಶೇ.10 ರಷ್ಟು ಹುದ್ದೆಗಳನ್ನು ಮೀಸಲಿಡುವುದು. ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದಲ್ಲಿ ಸದರಿ ಹುದ್ದೆಗಳನ್ನು ಇತರೆ ಗುರುತಿಸಲ್ಪಟ್ಟ ಸಂತ್ರಸ್ಥರುಗಳಿಗೆ ಅಥವಾ ಅವರ ಕುಟುಂಬದ ಸದಸ್ಯರಿಗೆ (ಗಂಡ, ಹೆಂಡತಿ, ಮಗ/ ಮಗಳು) ಒಟ್ಟು ವರ್ಗಗಳಿಂದ ಭರ್ತಿ ಮಾಡಲು ಕ್ರಮವಹಿಸುವುದು.
5. ಮೇಲ್ಕಾಣಿಸಿದ ಕ್ರಮ ಸಂಖ್ಯೆ ನೀಡಿದ ನಂತರ ಬಾಕಿ ಉಳಿಯುವ ಖಾಲಿ ಹುದ್ದೆಗಳನ್ನು 1 ರಿಂದ 4 ರಲ್ಲಿ ತಿಳಿಸಿರುವ ವರ್ಗದವರಿಗೆ ಆದ್ಯತೆ ಇತರೆ ವರ್ಗಗಳಿಂದ ಭರ್ತಿ ಮಾಡಬಹುದಾಗಿದೆ.
6. ನೇರ ಪಾವತಿಯಡಿ ನೇಮಕಾತಿ ಮಾಡಿಕೊಳ್ಳುವ ಪದ್ಧತಿ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ಸಮಾಜ ಕಲ್ಯಾಣ ಇಲಾಖೆ ಇವರು ನೀಡಿರುವ ಅಭಿಪ್ರಾಯ ಅನುಸರಿಸಿ), (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ ದಲ್ಲಿ ಉಲ್ಲೇಖಿಸಿರುವುದಿಲ್ಲ. ಆದ ಕಾರಣ ನೇರಪಾವತಿಯಡಿ ನೇಮಕಾತಿ ಪ್ರಕ್ರಿಯೆಯು ಸದರಿ ಅಧಿನಿಯಮಕ್ಕೆ ಒಳಪಟ್ಟಿರುವುದಿಲ್ಲ ಮತ್ತು ಮೀಸಲಾತಿ ಅನ್ವಯಿಸುವುದಿಲ್ಲ (1 ರಿಂದ 4 ರಲ್ಲಿ ತಿಳಿಸಿರುವಂತಹ ಅಭ್ಯರ್ಥಿಗಳು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ದೃಢೀಕರಣ ಪಡೆದಿರಬೇಕು.

**ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:**

1. ನಿಗಧಿತ ಅರ್ಜಿ ನಮೂನೆ (ಅರ್ಜಿಯಲ್ಲಿನ ಎಲ್ಲಾ ಅಂಶಗಳನ್ನು ಭರ್ತಿ ಮಾಡುವುದು)
2. ಇತ್ತಿಚಿನ ಅಳತೆಯ ಭಾವಚಿತ್ರ ಪಾಸ್‌ಪೋರ್ಟ್
3. ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಗುರುತಿನ ಚೀಟಿ (EPIC) ಶೈಕ್ಷಣಿಕ ದಾಖಲೆಗಳು/ಆಧಾರ್ ಕಾರ್ಡ್/ಪಡಿತರ ಚೀಟಿ/ಮತದಾರರ ದಾಖಲೆಗಳನ್ನು ಸಲ್ಲಿಸುವುದು.
4. ಈ ಹಿಂದೆ ಸಂಬಂಧಿಸಿದ ಹಾಜರಾತಿ ದಾಖಲೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ / ದಿನಗೂಲಿ/ ಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಪೌರಕಾರ್ಮಿಕ, ಲೋಡರ್ಸ್, ಯುಜಿಡಿ ಹೆಲ್ಪರ್ಸ್, ESI/EPF ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ದಾಖಲೆ ಅಥವಾ ಸಲ್ಲಿಸುವುದು.
5. ಈ ಹಿಂದೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ / ದಿನಗೂಲಿ / ಗುತ್ತಿಗೆ / ಆಧಾರದ ಮೇಲೆ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿಸುವಾಗ ಕೋವಿಡ್-19 ರ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಅಥವಾ ಇತರೆ ಕಾರಣಗಳಿಂದ ಮರಣ ಹೊಂದಿದ ಪೌರಕಾರ್ಮಿಕರ ವಿವರಗಳನ್ನೊಳಗೊಂಡ ಮೃತ ಕುಟುಂಬದ ಒಬ್ಬ ಸದಸ್ಯರನ್ನು ನೇರ ಪಾವತಿಯಡಿ ನೇಮಕ ಮಾಡಿಕೊಳ್ಳಲು ದಾಖಲೆಗಳನ್ನು ಸಲ್ಲಿಸುವುದು.
6. ಈ ಹಿಂದೆ ಮತ್ತು ತ್ಯಾಜ್ಯ ಸಂಸ್ಕರಣ ಘಟಕ, ಸಾರ್ವಜನಿಕ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಠ ಒಂದು ವರ್ಷ ಲೋಡರ್ಸ್/ಯುಜಿಡಿ ಹೆಲ್ಪರ್ಸ್, ಕ್ಲೀನರ್ಸ್, ಹೆಲ್ಪರ್ಸ್ ಶೌಚಾಲಯ, ಶೂನ್ಯ ತ್ಯಾಜ್ಯ ಘಟಕದಲ್ಲಿ ಕಾರ್ಯ ನಿರ್ವಹಿಸಿದ್ದಲ್ಲಿ ಅವಧಿಗೆ ESI/EPF ವೇತನ ಪಾವತಿಸಿರುವ ಬ್ಯಾಂಕ್ ಪಾಸ್ ಬುಕ್ ದಾಖಲೆ ಅಥವಾ ಹಾಜರಾತಿ ದಾಖಲೆಗಳನ್ನು ಸಲ್ಲಿಸುವುದು.

**ನೇಮಕಾತಿ ಷರತ್ತುಗಳು:**

1. ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ಮತ್ತು ಪಿ.ಎಫ್ ಮತ್ತು ಇ.ಎಸ್.ಐ ಕಾಯ್ದೆಯನ್ವಯ ವೇತನ ನಿಗದಿಪಡಿಸುವುದು ಹಾಗೂ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ಪರಿಷ್ಕರಿಸುವ ವೇತನವನ್ನು ಸೌಲಭ್ಯವನ್ನು ಕಲ್ಪಿಸುವುದು.
2. ನೇರಪಾವತಿಯಡಿ ಆಯ್ಕೆಗೊಂಡ ಪೌರಕಾರ್ಮಿಕರು ತಾತ್ಕಾಲಿಕವಾಗಿ ನೇಮಕವಾಗಿದ್ದು ಖಾಯಂ ನೌಕರರಿಗೆ ನೀಡುವಂತಹ ಇತರೇ ಯಾವುದೇ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ ಮತ್ತು ವ್ಯಕ್ತಿಗತವಾಗಿ ಅಥವಾ ಸಂಘಗಳನ್ನು ಸ್ಥಾಪಿಸಿಕೊಂಡು ಖಾಯಂ ಮಾಡುವಂತೆ ಒತ್ತಾಯಿಸುವಂತಿಲ್ಲ ಹಾಗೂ ಖಾಯಂ ಮಾಡುವಂತೆ ಯಾವುದೇ ನ್ಯಾಯಾಲಯದ ಮೊರೆ ಹೋಗುವುದಕ್ಕೆ ಆಸ್ಪದವಿರುವುದಿಲ್ಲ. (ಈ ಕುರಿತು ಆಯ್ಕೆಗೊಂಡ ಅಭ್ಯರ್ಥಿಗಳಿಂದ Notary Affidavit ಕಡ್ಡಾಯವಾಗಿ ಪಡೆಯತಕ್ಕದ್ದು).
3. ನೇರಪಾವತಿಗೆ ಆಯ್ಕೆಯಾಗುವವರು ಆರೋಗ್ಯವಂತರಾಗಿರಬೇಕು ಯಾವುದೇ ಕಾಯಿಲೆಗಳಿಂದ ಬಳಲುತ್ತಿರುವವರಾಗಿರಬಾರದು. ಈ ಕುರಿತು ವೈದ್ಯಾಧಿಕಾರಿಗಳಿಂದ ವೈದ್ಯಕೀಯ ದೃಢೀಕರಣ ಪತ್ರ ಪಡೆಯತಕ್ಕದ್ದು.
4. ನೇರ ಪಾವತಿಯಡಿ ಆಯ್ಕೆ ಹೊಂದಿರುವವರು ಕರ್ತವ್ಯ ನಿರ್ವಹಿಸುವ ಸಂಧರ್ಭದಲ್ಲಿ ಮೃತರಾದಲ್ಲಿ, ಅನುಕಂಪ ನೇಮಕಾತಿ, ಪಿಂಚಣಿ, ಉಪದಾನ, ಇತ್ಯಾದಿ ಯಾವುದೇ ಸೇವಾ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
5. ನೇರಪಾವತಿಯಡಿ ಆಯ್ಕೆ ಹೊಂದಿರುವ ಪೌರಕಾರ್ಮಿಕರು, ಸ್ವಚ್ಛತಾ ಕೆಲಸವನ್ನೇ ನಿರ್ವಹಿಸಬೇಕು. ಅದಲ್ಲದೇ ಇತರೆ ಯಾವುದೇ ಕೆಲಸಕ್ಕೆ ಅಥವಾ ಕಚೇರಿ ಕೆಲಸಗಳಿಗೆ ನಿರ್ವಹಿಸುವಂತಿಲ್ಲ/ನಿಯೋಜಿಸುವಂತಿಲ್ಲ.
6. ನೇರಪಾವತಿಯಡಿ ಆಯ್ಕೆಗೊಂಡವರುಗಳ ಹೊರತು, ಸದರಿಯವರ ಹೆಸರಿನಲ್ಲಿ ಯಾವುದೇ ಸಂದರ್ಭದಲ್ಲಿಯೂ ಬೇರೊಬ್ಬರು ಕರ್ತವ್ಯ ನಿರ್ವಹಿಸುವಂತಿಲ್ಲ.
7. ನೇರಪಾವತಿಯಡಿ ಆಯ್ಕೆಗೊಂಡವರು ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದಲ್ಲಿ ಅಥವಾ ಕಛೇರಿ ಮುಖ್ಯಸ್ಥರು ನೀಡುವ ಸೂಚನೆ ಮತ್ತು ಸಲಹೆಗಳನ್ನು ಪಾಲಿಸದೇ ಇದ್ದಲ್ಲಿ, ಸಂಬಂಧಿಸಿದ ಆಯುಕ್ತರು/ಪೌರಾಯುಕ್ತರು ಯಾವುದೇ ಮೂನ್ಸೂಚನೆ ನೀಡದೇ ಸದರಿಯವರುಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಕ್ರಮಕೈಗೊಳ್ಳುವುದು.

8. ನೇರಪಾವತಿಯಡಿ ಆಯ್ಕೆಗೊಂಡಿರುವ ನೌಕರರು ಸರ್ಕಾರದಿಂದ, ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆಗಳಿಗೆ ಬದ್ಧರಾಗಿರತಕ್ಕದ್ದು. (ಈ ಕುರಿತು ಆಯ್ಕೆಗೊಂಡ ಅಭ್ಯರ್ಥಿಗಳಿಂದ Notary Affidavit ಕಡ್ಡಾಯವಾಗಿ ಪಡೆಯತಕ್ಕದ್ದು).
9. ಕೊನೆಯ ದಿನಾಂಕದ ನಂತರ ಹಾಕಿದ ಅರ್ಜಿಯನ್ನು ಮತ್ತು ಅಪೂರ್ಣವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
10. ಅರ್ಜಿ ಸ್ವೀಕರಿಸಲು ನಿಗಧಿಪಡಿಸಿದ ಸಮಯ ಮುಕ್ತಾಯವಾದ ದಿನದಂದು ಸಂಜೆ 6.00 ಗಂಟೆಯೊಳಗಾಗಿ ಸ್ವೀಕೃತಿಯಾದ ಅರ್ಜಿಗಳ ಸಂಖ್ಯೆ ಮತ್ತು ಅರ್ಜಿಗಳನ್ನು ಸಂಬಂಧಿಸಿದ ಪೌರಾಯುಕ್ತರು ಈ ಕಛೇರಿಗೆ ಸಲ್ಲಿಸುವುದು.
11. ಅರ್ಜಿಯಲ್ಲಿ ತಪ್ಪು/ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ರದ್ದುಗೊಳಿಸುವುದಲ್ಲದೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.
12. ನೇರ ಪಾವತಿ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರಪಾವತಿ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು ಯಾದಗಿರಿ ಜಿಲ್ಲೆ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

18/07/24

ಅಧ್ಯಕ್ಷರು,
ಆಯ್ಕೆ ಮತ್ತು ನೇರಪಾವತಿ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ

ಪ್ರತಿಯನ್ನು:
1. ಆಯುಕ್ತರು, ಬಿದರ ಮಹಾನಗರ ಪಾಲಿಕೆ ಬೀದರ /ಪೌರಾಯುಕ್ತರು ನಗರಸಭೆ ಬಸವಕಲ್ಯಾಣ ರವರಿಗೆ ಕಳುಹಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ಅಧಿಕೃತ ವೆಬ್ ಸೈಟ್‌ನಲ್ಲಿ ಪ್ರಚೂರಪಡಿಸಲು ತಿಳಿಸಿದೆ.
2. ಕಛೇರಿ ಕಡತಕ್ಕೆ.

ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ

**District Urban Development Cell, Bidar.**

Office of the Deputy Commissioner, Bidar. Opp Old Bus Stand Bidar - 585 401.
Ph. No: 08482-229332, Fax: 08482-225262 E-mail: ka.bidar.dudc@gmail.com

ಸಂಖ್ಯೆ:ಜಿನಕೋ/ಸಿಬ್ಬಂದಿ/ಸಿಆರ್-20/2026-27 ದಿನಾಂಕ: -07-2026

## -: ಅಧಿಸೂಚನೆ :-

ವಿಷಯ : ರಾಜ್ಯದ ಮಹಾನಗರ ಪಾಲಿಕೆ ಮತ್ತು ನಗರಸಭೆಗಳಲ್ಲಿ ನೇರ ಪಾವತಿಯಡಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.

ಉಲ್ಲೇಖ: ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರುರವರ ಪತ್ರ ಸಂಖ್ಯೆ:513641/ಸಿಬ್ಬಂದಿ-2/ಇತರೆ/8/2021 ದಿನಾಂಕ 18.11.2025

***

ಮಹಾನಗರಪಾಲಿಕೆ ಮತ್ತು ನಗರಸಭೆಗಳಲ್ಲಿ ಶೇ.50 ರಷ್ಟು ಪೌರಕಾರ್ಮಿಕರನ್ನು ನೇರ ನೇಮಕಾತಿ ಉಳಿದ ಶೇ.50 ರಷ್ಟು ಪೌರಕಾರ್ಮಿಕರನ್ನು ನೇರಪಾವತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ. ಉಲ್ಲೇಖಿತ ಪತ್ರದಲ್ಲಿನ ಮಾರ್ಗಸೂಚಿಗಳನುಸಾರ ಜಿಲ್ಲೆಯಲ್ಲಿನ ನಗರಸಭೆಗಳಲ್ಲಿನ ನೇರಪಾವತಿಗೆ ಮಂಜೂರಾಗಿರುವ ಹುದ್ದೆಗಳನ್ನು ಮೀರದಂತೆ ಖಾಲಿ ಹುದ್ದೆಗಳನ್ನು ಖಚಿತಪಡಿಸಿಕೊಂಡು ನೇಮಕ ಮಾಡಿಕೊಳ್ಳಲು ಕ್ರಮವಹಿಸಲು ಆದೇಶಿಸಿರುತ್ತಾರೆ.

ಅದರಂತೆ ಬೀದರ ಜಿಲ್ಲೆಯ ಬೀದರ ಮಹಾನಗರ ಪಾಲಿಕೆ ಮತ್ತು ಬಸವಕಲ್ಯಾಣ ನಗರಸಭೆಯಲ್ಲಿ ಪೌರಕಾರ್ಮಿರ ಕೊರತೆಯಿಂದಾಗಿ ಘನತ್ಯಾಜ್ಯ ನಿರ್ವಹಣೆ ಹಾಗೂ ಸ್ವಚ್ಛತಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ತೊಂದರೆಯಾಗುತ್ತಿದೆ. ಸಾರ್ವಜನಿಕ ಆರೋಗ್ಯ ಹಾಗೂ ಸ್ವಚ್ಛತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಪೌರಕಾರ್ಮಿಕ ಹುದ್ದೆಗಳನ್ನು ನೇರಪಾವತಿ ಮೂಲಕ ಭರ್ತಿ ಮಾಡಬೇಕಾಗಿರುವುದರಿಂದ ನೇರಪಾವತಿಯಡಿಯಲ್ಲಿ ಖಾಲಿ ಇರುವ ಈ ಕೆಳಕಂಡಂತೆ ಪೌರಕಾರ್ಮಿಕ ಹುದ್ದೆಗಳನ್ನು ನೇರಪಾವತಿ ಮುಖಾಂತರ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆ ಹೆಸರು | 700:1 ರಂತೆ ಮಂಜೂರಾದ ಪೌರ ಕಾರ್ಮಿಕ ಹುದ್ದೆಗಳ ಸಂಖ್ಯೆ (2024ನೇ ಸಾಲಿನ ಹಂತಕ್ಕೆ ಇರುವಂತೆ ಜನಸಂಖ್ಯೆ) | ನೇರ ಪಾವತಿಗೆ ಮಂಜೂರಾದ ಹುದ್ದೆಗಳ (ನಗರಸಭೆಗಳಿಗೆ ಶೇ. 50%) | ನೇರ ಪಾವತಿಯಲ್ಲಿ ಭರ್ತಿ ಹುದ್ದೆಗಳ ಸಂಖ್ಯೆ | ನೇರ ಪಾವತಿಗೆ ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಬೀದರ ಮಹಾನಗರ ಪಾಲಿಕ | 311670 | 222 | 17 | 205 |
| 2 | ನಗರಸಭೆ ಬಸವಕಲ್ಯಾಣ | 84072 | 120 | 1 | 59 |

**ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕಾಲಮಿತಿ ಹಾಗೂ ವಿಳಾಸ:**

| **ವಿವರ** | **ದಿನಾಂಕ ಮತ್ತು ಸಮಯ** | **ಅರ್ಜಿ ನಮೂನೆ ಪಡೆಯುವ/ ಸಲ್ಲಿಸುವ ವಿಳಾಸ** |
|---|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭ ದಿನಾಂಕ | ದಿನಾಂಕ18.07.2026 ರಿಂದ ಬೆ: 10:30 ರಿಂದ ಸಾ: 05.30 ರವರೆಗೆ (ರಜೆ ದಿನ ಹೊರತುಪಡಿಸಿ) | ಆಯುಕ್ತರು, ಬೀದರ ಮಹಾನಗರ ಪಾಲಿಕೆ ಕಾರ್ಯಾಲಯ ಬೀದರ |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ 20 .08.2026 ರವರೆಗೆ ಸಾ: 05.30 ರವರೆಗೆ | |

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕಾಲಮಿತಿ ಹಾಗೂ ವಿಳಾಸ:

| ವಿವರ | ದಿನಾಂಕ ಮತ್ತು ಸಮಯ | ಅರ್ಜಿ ನಮೂನೆ ಪಡೆಯುವ/ ಸಲ್ಲಿಸುವ ವಿಳಾಸ |
|---|---|---|
| ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭ ದಿನಾಂಕ | ದಿನಾಂಕ 18.07.2026 ರಿಂದ ಬೆ: 10:30 ರಿಂದ ಸಾ: 05.30 ರವರೆಗೆ (ರಜೆ ದಿನ ಹೊರತುಪಡಿಸಿ) | ಪೌರಾಯುಕ್ತರು, ನಗರಸಭೆ ಕಾರ್ಯಾಲಯ ಬಸವಕಲ್ಯಾಣ |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ [illegible].08.2026 ರವರೆಗೆ ಸಾ: 05.30 ರವರೆಗೆ | |

ಹೆಚ್ಚಿನ ಮಾಹಿತಿಗಾಗಿ **bidar.nic.in** ಜಾಲತಾಣಕ್ಕೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಅಧ್ಯಕ್ಷರು,
ಆಯ್ಕೆ ಮತ್ತು ನೇರಪಾವತಿ ನೇಮಕಾತಿ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಗಳು, ಬೀದರ ಜಿಲ್ಲೆ, ಬೀದರ